ನಾನು ಹೇಳುವುದಿಷ್ಟೆ, ನಾನು ಪೂರ್ವಾಗ್ರಹಪೀಡಿತರಾಗುವುದಕ್ಕೆ ಕಾರಣವಿಲ್ಲ. ಯಾವುದೇ ಕೆಲಸ ಕಾರ್ಯಗಳನ್ನು ಮಾಡಬೇಕಾದಾಗ ನಿಮ್ಮಿಂದ ನಾನು ಅನೇಕ ವಿಚಾರಗಳನ್ನು ಕಲಿತಿದ್ದೇನೆ. ಹಾಗೆ ಕಲಿತಿರುವುದರಿಂದ ದಾರಿ ತೋರುವ ಪ್ರಯತ್ನವನ್ನು ಮಾಡಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ,..

ಅಧ್ಯಕ್ಷರು: ಹಿಂದಿನ ಪಿಡಬ್ಲ್ಯೂಡಿ ಮಿನಿಸ್ಟರ್‌ರವರೆ, ನಿಮಗೂ ಮತ್ತು ಅವರಿಗೂ ಸೇರಿದೆ. ಹಿಂದಿನ ಲೋಕೋಪಯೋಗಿ ಮಂತ್ರಿಗಳು ಮತ್ತು ಇಂದಿನ ಲೋಕೋಪಯೋಗಿ ಮಂತ್ರಿಗಳಿಗೂ ಸೇರಿದೆ.

ಶ್ರೀ ಹೆಚ್.ಡಿ.ರೇವಣ್ಣ: ನಾನು ಅವರನ್ನು ಹೊಗಳಿದರೂ ಕೂಡ ಅದನ್ನು ತಪ್ಪು ಗ್ರಹಿಸಿದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಇದು ನೀರಾವರಿ ಇಲಾಖೆಗೆ ಸೇರಿದೆ ಸೇತುವೆ ಎಂದು ಅವರು ಹೇಳುತ್ತಾರೆ. ಆದರೆ ಈ ರಸ್ತೆ ಇರುವುದು ಎಂಡಿಆರ್, Major District Road ಎಂದು ನಾನು ದಯಮಾಡಿ ಅಫರ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಕೂಡಲೇ ಮಾಡಿ, ಅಮೇಲೆ ನನ್ನಿಂದ ಕಲಿತಿರುವುದನ್ನು ಇನ್ನು ಸ್ವಲ್ಪ ಜಾಸ್ತಿ ಮಾಡಲಿ. ನಾನು ಬೇಡವೆಂದು ಹೇಳುವುದಿಲ್ಲ. ಅದಕ್ಕಾಗಿ ದಯಮಾಡಿ ಮಾನ್ಯ ಉದಾಸಿಯವರು ಇದಕ್ಕೆ ಉದಾಸೀನ ಮಾಡುವುದು ಬೇಡ, 15 ದಿವಸದಲ್ಲಿ ಡೀವಿಯೇಷನ್ ರೋಡ್‌ನ್ನು ಮಾಡಿಕೊಡಲಿ.

ಅಧ್ಯಕ್ಷರು: ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ.ಎಂ.ಉದಾಸಿ: ಅತೀ ಶೀಘ್ರದಲ್ಲಿಯೇ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: O.K.

ಶ್ರೀ ರುದ್ರೇಶ್‌ಗೌಡ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ನಾನು ಮತನಾಡುತ್ತೇನೆ.

ಅಧ್ಯಕ್ಷರು: ಬೇಡ. ಈಗ ಎಲ್ಲವೂ ಮುಗಿದಿದೆ.

ಶ್ರೀ ರುದ್ರೇಶ್‌ಗೌಡ: ಈ ಬಗ್ಗೆ MDR ನಲ್ಲಿ ಸೇತುವೆ ಹಾಳಾಗಿ ಹೋದಾಗ ನಾವು ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರ ಗಮನಕ್ಕೆ ತಂದಾಗ ರಾಜ್ಯ ಸರ್ಕಾರದವರು ಅಧಿಕಾರವನ್ನು ಕೊಟ್ಟಿರುವುದಿಲ್ಲ. ಇವರಿಗೆ ಪವರ್‌ನ್ನು ಕೊಟ್ಟರೆ Major District Road ನಲ್ಲಿ ಗೋಡೆಗಳು ಕುಸಿದಾಗ, ಸೇತುವೆಗಳು ಹಾಳಾದಾಗ immediate workನ್ನು ತೆಗೆದುಕೊಳ್ಳುವಂತಹ ಅಧಿಕಾರವನ್ನು Superintending Engineerರವರಿಗೆ ಕೊಡಬೇಕೆಂದು ಸನ್ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಹೊಸ ಸೇತುವೆ ನಿರ್ಮಾಣ ಕುರಿತು.

53(599) ಶ್ರೀ.ಸಂಗಮೇಶ್ವರ ಬಿ.ಕೆ.(ಭದ್ರಾವತಿ)

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು)

ಅ) ತರೀಕೆರೆ ಮಾರ್ಗವಾಗಿ ಭದ್ರಾವತಿಯಿಂದ ಶಿವಮೊಗ್ಗಕ್ಕೆ ಹೋಗುವ ಎಲ್ಲಾ ವಾಹನಗಳು ಭದ್ರಾವತಿ ಸೇತುವೆ ಮೇಲೆ ಹಾದು ಹೋಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಗಮನಕ್ಕೆ ಬಂದಿದೆ.

ಆ) ಈ ಮಾರ್ಗದಲ್ಲಿರುವ ಭದ್ರಾವತಿ ಸೇತುವೆ ಹಳೆಯದಾಗಿದ್ದು ಹೊಸ ಸೇತುವೆಯನ್ನು ನಿರ್ಮಾಣ ಮಾಡಲು ಸುಮಾರು ಹತ್ತು ಬಾರಿ ಮನವಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಗಮನಕ್ಕೆ ಬಂದಿದೆ.

ಇ) ಹಾಗಿದ್ದಲ್ಲಿ, ಎಂದಿನಿಂದ ಹೊಸ ಸೇತುವೆ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು;

ಹೊಸ ಸೇತುವೆ ನಿರ್ಮಾಣಕ್ಕೆ ರೂ.500.00 ಲಕ್ಷಗಳ ಅವಶ್ಯಕತೆಯಿದ್ದು, ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಭದ್ರಾವತಿ ನಗರದಲ್ಲಿ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಲೋಕೋಪಯೋಗಿ ರಸ್ತೆಗಳು ಹಾಳಾಗಿದ್ದು, ಹೆಚ್ಚಿನ ಅನುದಾನ ಬಿಡುಗಡೆ ಮಾಡಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದೇ;

ಭದ್ರಾವತಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು ರಾಜ್ಯ ಹೆದ್ದಾರಿ 108 ಕಿಮೀ. ಜಿಲ್ಲಾ ಮುಖ್ಯ ರಸ್ತೆ 205 ಕಿಮೀ. ಒಟ್ಟು 313 ಕಿಮೀ. ಲೋಕೋಪಯೋಗಿ ಇಲಾಖೆಯ ರಸ್ತೆ ಇರುತ್ತದೆ. 2008–09ನೇ ಸಾಲಿನಲ್ಲಿ 3054 ಯೋಜನೆ ಲೆಕ್ಕಶೀರ್ಷಿಕೆಯಲ್ಲಿ ರೂ.80.00 ಲಕ್ಷಗಳಲ್ಲಿ ಗುಂಡಿ. ಮುಚ್ಚಿಸಲಾಗಿದ್ದು, ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ. ಉಳಿದ ಬಾಕಿ ಕಾಮಗಾರಿಗಳಿಗೆ 12ನೇ ಹಣಕಾಸು ಯೋಜನೆಯಲ್ಲಿ ಹಣ ಒದಗಿಸಿ ಪೂರ್ಣಗೊಳಿಸಲಾಗುವುದು.

ಉ) ಭದ್ರಾವತಿ ಮತಕ್ಷೇತ್ರದಲ್ಲಿ ಲೋಕೋಪಯೋಗಿ ಕಾಮಗಾರಿಗಳು ಅಪೂರ್ಣಗೊಂಡಿದ್ದು, ಹೆಚ್ಚಿನ ಅನುದಾನ ಬಿಡುಗಡೆ ಮಾಡಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದೇ;

ಭದ್ರಾವತಿ ಮತಕ್ಷೇತ್ರದಲ್ಲಿ ಲೋಕೋಪಯೋಗಿ ವತಿಯಿಂದ ಕೈಗೊಂಡಿರುವ ಒಟ್ಟು ಆರು ರಸ್ತೆ ಕಾಮಗಾರಿಗಳು ಹಾಗೂ 4 ಸೇತುವೆ ಕಾಮಗಾರಿಗಳು ಹಾಗೂ 15 ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿದ್ದು ಈಗ ಬಿಡುಗಡೆ ಮಾಡಿರುವ ಅನುದಾನದಲ್ಲಿ ಕಾಮಗಾರಿಗಳನ್ನು ಈಗಾಗಲೇ ಪ್ರಾರಂಭಿಸಿದ್ದು, ಎಲ್ಲಾ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು.

ಶ್ರೀ ಬಿ.ಕೆ.ಸಂಗಮೇಶ್ವರ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ಸಣ್ಣ ಸಣ್ಣ ಸೇತುವೆಗಳು ನಮ್ಮ ಭದ್ರಾವತಿ ಕ್ಷೇತ್ರದಲ್ಲಿ ಕಾರ್ಯ

ಪ್ರಾರಂಭವಾಗಿದೆ. ಅದಕ್ಕಾಗಿ ಪಿಡಬ್ಲ್ಯೂಡಿ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇವೆ. ಆದರೆ ಮುಖ್ಯವಾಗಿ ತಮ್ಮ ತುಮಕೂರು ಹೊನ್ನಾವರ 186ನೇ ಮೈಲಿಗಲ್ಲು ಮಾಧವಚಾರಿ ಸರ್ಕಲ್‌ನಲ್ಲಿ ಊರಿನ ಮಧ್ಯೆ ಇರತಕ್ಕಂತಹ 150 ವರ್ಷದ ಓಲ್ಡ್ ಬ್ರಿಡ್ಜ್ ಆ ಬ್ರಿಡ್ಜ್‌ನ ಮುಖಾಂತರ ವಿಐಎಸ್‌ಎಲ್ ಮತ್ತು ಎಂಪಿಎಂ ಕಾಗದ ಕಾರ್ಖಾನೆಯು ಮತ್ತು ವಿಐಎಸ್‌ಎಲ್ ಕಬ್ಬಿಣ ಕಾರ್ಖಾನೆಗೆ ಸುಮಾರು ಸಾವಿರಾರು ವೆಹಿಕಲ್‌ಗಳು ಓಡಾಡುತ್ತವೆ. ದಯವಿಟ್ಟು ಇದನ್ನು ಪಿಡಬ್ಲ್ಯೂಡಿ ಸಚಿವರು ಗಮನ ಹರಿಸಿ ಅದಷ್ಟು ಬೇಗನೇ ಆ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು ತಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅದೇ ರೀತಿಯಾಗಿ ಬ್ರಿಡ್ಜ್‌ಗೆ 5 ಕೋಟಿ ರೂಪಾಯಿಗಳ ಪ್ರಸ್ತಾವನೆ ಸರ್ಕಾರದಲ್ಲಿದೆ ಎಂದು ಹೇಳಿದ್ದಾರೆ. ಈ ಐದು ಕೋಟಿ ರೂಪಾಯಿಗಳು ಸಾಕಾಗುವುದಿಲ್ಲ. ಸುಮಾರು 12–13 ಕೋಟಿ ರೂಪಾಯಿಗಳ ಎಷ್ಟಿಮೇಟ್‌ನ್ನು ಇಂಜಿನಿಯರ್‌ರವರು ಮಾಡಿಕೊಟ್ಟಿದ್ದಾರೆ. ದಯವಿಟ್ಟು ನಮ್ಮ ಸಚಿವರು ಆ ಬಗ್ಗೆ ಗಮನವನ್ನು ಹರಿಸಿ ನನ್ನ ಕ್ಷೇತ್ರ, ವ್ಯಾಪ್ತಿಗೆ ಬರುವಂತಹ 2 ಬ್ರಿಡ್ಜ್‌ಗಳ ಕಾಮಗಾರಿಯನ್ನು ತುರ್ತಾಗಿ ಪ್ರಾರಂಭ ಮಾಡುವುದಕ್ಕೆ ಯಾವ ರೀತಿಯಾಗಿ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂದು ತಿಳಿಸಬೇಕೆಂದು ತಮ್ಮ ಮುಖಾಂತರ ನಮ್ಮ ಪಿಡಬ್ಲ್ಯೂಡಿ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಸದಸ್ಯರು ಹೇಳಿರುವಂತಹ ವಿಚಾರವು ನಮ್ಮ ಗಮನಕ್ಕೆ ಬಂದಿದೆ. ಆ ಕಾರಣದಿಂದ ಕೆಆರ್‌ಡಿಸಿಎಲ್‌ನವರಲ್ಲಿ ಪ್ರಸ್ತಾವನೆಯನ್ನು ಮಂಡಿಸಿರುವುದು ಅತೀ ಶೀಘ್ರದಲ್ಲಿಯೇ ಸೇತುವೆ ನಿರ್ಮಾಣಕ್ಕೆ ಬೇಕಾಗಿರುವಂತಹ ಒಂದು ಟೆಂಡರ್‌ನ್ನು ಕರೆದು ವ್ಯವಸ್ಥೆ ಮಾಡಲಾಗುವುದು ಎಂಬ ಭರವಸೆಯನ್ನು ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಕೆ.ಸಂಗಮೇಶ್ವರ: ಪಿಡಬ್ಲ್ಯೂಡಿ ಕಾರ್ಯದರ್ಶಿಯವರನ್ನು ಮತ್ತು ಪಿಡಬ್ಲ್ಯೂಡಿ ಮಂತ್ರಿಯವರನ್ನು ಕೇಳಿ ಎಂದು ಹೇಳಿದ್ದಾರೆ. ದಯಮಾಡಿ ನಮ್ಮ ಬಗ್ಗೆ ಸ್ವಲ್ಪ ಅನುಕಂಪ ಇಟ್ಟು ಅದನ್ನು ಮಾಡಿಕೊಡಲಿ ಎಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಇದು ಒಂದು ಅತ್ಯಂತ ಪ್ರಮುಖವಾದಂಥ ಸೇತುವೆ ಎಂದು ನಮಗೆ ಗೊತ್ತಿದೆ. ಒಂದು ವೇಳೆ ಅಲ್ಲಿ ಸೇತುವೆ ಬಿದ್ದುಹೋದರೆ ಸಂಪರ್ಕ ರದ್ದಾದರೆ ಬಹಳಷ್ಟು ಸಮಸ್ಯೆಗಳು ಆಗಬಹುದು ಎಂದು ನನ್ನ ಗಮನಕ್ಕೆ ಬಂದಿದೆ. ನಾನು ಮೊನ್ನೆ ಸ್ವತ: ಅಲ್ಲಿಗೆ ಹೋಗಿದ್ದಾಗ ಆ ಸೇತುವೆಯನ್ನು ನೋಡಿಕೊಂಡು ಬಂದಿದ್ದೇನೆ. ಅದರ ಬಗ್ಗೆ ಶೀಘ್ರದಲ್ಲಿಯೇ ಕ್ರಮವನ್ನು ಕೈಗೊಳ್ಳುತ್ತೇನೆ.

ತಿಪ್ಪಗೊಂಡನಹಳ್ಳಿ ಬ್ರಿಡ್ಜ್ ನಿರ್ಮಾಣದ ಬಗ್ಗೆ

58(487) ಶ್ರೀ ಬಾಲಕೃಷ್ಣ ಹೆಚ್.ಸಿ.(ಮಾಗಡಿ)